ಹಾನಗೆಲ್ ತಾಲ್ಲೂಕು ಉಪ್ಪಣಾಸಿ ಗ್ರಾಮದ ಶ್ರೀಮತಿ ನಾಗವ್ವ ಎನ್ನುವವರ ಮೇಲೆ ಮಾನಭಂಗ ಮತ್ತು ಮಂಗಳ ಸೂತ್ರ ದೋಚಿದ ಆರೋಪಿಯ ಮೇಲೆ ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ.—

ಶ್ರೀ ಸಿ. ಎಂ. ಉದಾಸಿ.—ಹಾನಗಲ್ ತಾಲ್ಲೂಕು ಅಡೂರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಉಪ್ಪಣಾಸಿ ಗ್ರಾಮದ ಶ್ರೀಮತಿ ನಾಗವ್ವ C/o. ಶಂಕರಗೌಡ ಹ್ಯಾಗುವಾಡಿಯವರು ತಮ್ಮ ಮಾನಭಂಗ ಮಾಡಲುಬಂದ ಹಾಗೂ ಅವಳಿಂದ ಮಂಗಳ ಸೂತ್ರ ಬಂಗಾರ ಪದಕ ಸಹಿತ ಕೊರಳಲ್ಲಿಯ ಲಿಂಗದಕಾಯಿ ದೋಚಿದ್ದರ ಬಗ್ಗೆ ಆರೋಪಿ ಫಕ್ಕೀರಪ್ಪ ಒಡ್ಡರಿ ಮೇಲೆ ಲಿಖಿತ ಫಿರ್ಯಾದಿ ಕೊಡಲು ಪೋಲೀಸರಲ್ಲಿ ಹೋದರೆ ಆರೋಪಿಯನ್ನು ಶಿಕ್ಷಿಸದೆ ಫಿರ್ಯಾದಿಗ್ಗೆಅರ್ಜಿಯನ್ನು ವಿರೂಪಗೊಳಿಸಿ ನೋಂದಾಯಿಸಿಕೊಂಡು ಸೂಕ್ತ ರಕ್ಷಣೆ ಕೊಡದೆ ಇರುವ ಅಧಿಕಾರಿಗಳ ಕರ್ತವ್ಯ ಚ್ಯುತಿಮಾಡಿದ್ದನ್ನು ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು).—ಸನ್ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

ಹಿರಿಯೂರಿನಲ್ಲಿ ಗಣರಾಜ್ಯೋತ್ಸವದ ಸಮಾರಂಭದಲ್ಲಿ ಪೋಲೀಸ್ ಇಲಾಖೆಯಂವರು ಭಾಗವಹಿಸದೇ ಇದ್ದಾದರ ಬಗ್ಗೆ.—

ಶ್ರೀ ಆರ್. ರಾಮಯ್ಯ (ಹಿರಿಯೂರು).—ಹಿರಿಯೂರಿಂ ನಗರದಲ್ಲಿ ನಡೆದ ಗಣರಾಜ್ಯೋತ್ಸವ ಧ್ವಜಾರೋಹಣ ಮತ್ತು ಪಥಚಲನೆಯಲ್ಲಿ ಪೋಲೀಸ್ ಇಲಾಖೆಯವರು ಭಾಗವಹಿಸದಿರುವುದು ವ್ಯಸನಕಾರಿ ಈ ಹಿಂದೆ ಇದುವರೆಗೂ ನಡೆದ ಎಲ್ಲಾ ರಾಷ್ಟ್ರೀಯ ಹಬ್ಬಗಳಲ್ಲೂ ಈ ಇಲಾಖೆಯಂ ಭಾಗವಹಿಸುತ್ತಿದ್ದು ಇದೀಗ ಭಾಗವಹಿಸದಿರುವುದು ಅಲ್ಲಿಯ ಅಧಿಕಾರಿಗಳ ಉದಾಸೀನತೆಯನ್ನು ತೋರಿಸುತ್ತಿದೆ. ಈ ಸಮಾರಂಭವನ್ನು ವ್ಯವಸ್ಥೆಗೊಳಿಸಲು ಕರೆದಿದ್ದ ಸಭೆಯಲ್ಲಿ ಭಾಗವಹಿಸಿಯೂ ಗೊತ್ತುಪಡಿಸಿದ ೨೬-೧-೧೯೮೬ರ ಬೆಳಿಗಿನ ೮-೦೦ ಗಂಟೆಯ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಪಡೆದು ಹಾಜರಾಗದಿರುವುದು ವಿಷಾದಕರ. ಇಂಥ ರಾಷ್ಟ್ರೀಯ ಉತ್ಸವಗಳಲ್ಲಿ ಈ ಇಲಾಖೆಯು ಅವಶ್ಯಕವಾಗಿ ಭಾಗವಹಿಸುವಂತೆ ಕಟ್ಟಪಣೆಯಿರುವಾಗ ಈ ರೀತಿ ವಿಫಲವಾದ ಅಧಿಕಾರಿಗಳ ಮೇಲೆ ಸರಕಾರ ಕ್ರಮ ಜರುಗಿಸುವುದೇ ? ಸರ್ಕಾರ ಇಂಥ ಘನ ಉದ್ದೇಶಕ್ಕಾಗಿಯೇ ರಜಾ ದಿನವನ್ನು ಘೋಷಿಸಿ ಎಲ್ಲಾ ಇಲಾಖೆಯವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಿರುವವರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಉತ್ತರ ತರಿಸಿಕೊಡುತ್ತೇನೆ.

ಪಪತ್ತೂರು ಪಟ್ಟಣಕ್ಕೆ ಬೈಪಾಸ್ ಮಾರ್ಗದ ವ್ಯವಸ್ಥೆ ಮಾಡುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಪುತ್ತೂರು ಪಟ್ಟಣಕ್ಕೆ ಬೈಪಾಸು ಮಾರ್ಗದ ವ್ಯವಸ್ಥೆ ಹಲವಾರು ವರ್ಷಗಳಿಂದ ಕಾಮಿಮ ಬಿದ್ದಿರುವ ಕಾಮಗಾರಿ ಕೆಲಸ. ಈ ಮೊದಲು ಹಲವಾರು ಸಾರಿ ಈ ಸದನದಲ್ಲಿ ಈ ಕಾಮಗಾರಿಯ ಬಗ್ಗೆ ಪ್ರಸ್ತಾಪ ಬಂದಿದ್ದು ಈ ಕೆಲಸವನ್ನು ಕೂಡಲೇ ಪ್ರಾರಂಭಿಸುವುದಾಗಿ ಉತ್ತರ ಬಂದಿದ್ದರೂ ಈವರೆಗೆ ಯಾವುದೇ ರೀತಿಯ ಕೆಲಸ ಕಾರ್ಯಗಳು ನಡೆದು ಬಂದ ಹಾಗೆ ಇಲ್ಲ. ಪುತ್ತೂರು ಪಟ್ಟಣದ ನಡುವಿನಿಂದ ಹಾದು ಹೋಗುವ ರಾಜ್ಯ ರಸ್ತೆಯಲ್ಲಿ ದಿನಾಲೂ ವಾಹನ ಅಪಘಾತ ಹೆಚ್ಚುತ್ತಾ ಇದ್ದು, ಇದನ್ನು ನಿಯಂತ್ರಣಕ್ಕೆ ತರುವಂತಹ ಯಾವುದೇ ಅವಕಾಶವಿಲ್ಲ. ಆದುದರಿಂದ ಈ ಮಹತ್ವ ಪೂರ್ಣವಾದ ಕಾಮಗಾರಿಯನ್ನು ಕೂಡಲೇ ಕೈಗೊಂಡು ರಸ್ತೆ ಸಾರಿಗೆಗೆ ಇರುವ ಅಡ್ಡಿ ಹಾಗೂ ಅಪಘಾತದ ನಿಯಂತ್ರಣದ ಬಗ್ಗೆ ಪ್ರಪ್ರಥಮ ಪ್ರಾತಿನಿಧ್ಯ ಕೊಟ್ಟು ನಿವಾರಿಸಿ ಕೊಡಬೇಕಾಗಿ ಲೋಕೋಪಯೋಗಿ ಮಂತ್ರಿಗಳನ್ನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.